<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

<u>ಸಿಸಿ ನಂ.**1631/2022**</u>

ಚಾಸಾ-04 ಪ್ರಾಸಾ-02

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 15.02.2025

| | | |
|---|---|---|
| ಹೆಸರು | : | ಸಂಗಣ್ಣ |
| ತಂದೆಯ ಹೆಸರು | : | ಭಗವಂತ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ASI Jewargi PS |
| ವಾಸಸ್ಥಳ | : | ಜೇವರ್ಗಿ |

-: <u>ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-</u>

ದಿಃ29.03.2020 ರಿಂದ 05.08.2024 ರ ವರೆಗೆ ಪೋಲಿಸ ಮುಖ್ಯ ಪೇದೆ ಅಂತಾ ದೇವಲ ಗಾಣಗಾಪೂರ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 22.07.2022 ರಂದು ಚಾಸಾ-1, 5 ಮತ್ತು 6 ರವರೊಂದಿಗೆ ಗಸ್ತು ಕರ್ತವ್ಯದಲ್ಲಿದ್ದಾಗ ಚಾಸಾ-1 ರವರಿಗೆ ಗುಪ್ತ ಮಾಹಿತಿ ಬಂದ ಮೇರೆಗೆ ಬಂದರವಾಡ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹತ್ತಿರ ಅಕ್ರಮವಾಗಿ ಸರಾಯಿ ಮಾರಾಟ ಮಾಡುತ್ತಿದ್ದಾರೆ ಅಂತಾ ಮಾಹಿತಿ ಬಂದಿದ್ದು, ಸದರಿ ವಿಷಯವನ್ನು ನನಗೆ ಮತ್ತು ಚಾಸಾ-5 ಮತ್ತು 6 ರವರಿಗೆ ತಿಳಿಸಿದರು. ತದ ನಂತರ ಚಾಸಾ-6 ರವರಿಗೆ ಚಾಸಾ-1 ರವರು ಇಬ್ಬರ ಪಂಚರನ್ನು ಕರೆದುಕೊಂಡು ಬರಲು ತಿಳಿಸಿರುತ್ತಾರೆ. ಚಾಸಾ-6 ರವರು ಇಬ್ಬರು ಪಂಚರನ್ನು ಕರೆದುಕೊಂಡು ಬಂದರವಾಡ ಬಸ್ಸ ನಿಲ್ದಾಣಕ್ಕೆ ಬಂದಿರುತ್ತಾರೆ. ಸದರಿ ಪಂಚರವರ ಹೆಸರು ಚಾಸಾ-2 ಮತ್ತು 3 ಇರುತ್ತದೆ.

ತದ ನಂತರ ಚಾಸಾ-1 ರವರು ನನಗೆ, ಚಾಸಾ-5, ಮತ್ತು 6 ಮತ್ತು ಚಾಸಾ-2 ಮತ್ತು 3 ರವರೊಂದಿಗೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹತ್ತಿರ ನಡೆದುಕೊಂಡು ಹೋಗಿ ದಾಳಿ ಮಾಡುವುದನ್ನು ತಿಳಿಸಿರುತ್ತಾರೆ. ತದ ನಂತರ ನಾವು ಅಲ್ಲಿ ಹೋಗಿ ಒಬ್ಬ ವ್ಯಕ್ತಿಯನ್ನು ಹಿಡಿದಿರುತ್ತೇವೆ. ಚಾಸಾ-1 ರವರು ಬಂಧಿಸಿದ ವ್ಯಕ್ತಿಯ ಹೆಸರು ವಿಚಾರಿಸಿದಾಗ ಆತನು ಲಕ್ಷ್ಮಣ ಕೊಳಕರ ಅಂತಾ

ತಿಳಿಸಿರುತ್ತಾನೆ. ಆಗ ಆತನ ಬಳಿ ಇರುವ ವಸ್ತುಗಳನ್ನು ಪರಿಶೀಲನೆ ಮಾಡಿದಾಗ 90ML ನ 37 Original Choice Whiskey ಯ ಪೌಂಚಗಳು ಮತ್ತು ಆತನ ಬಳಿ ರೂ.240/-ಗಳು ಇದ್ದವು. ಅವುಗಳನ್ನು ಪಂಚರ ಸಮಕ್ಷಮ ಜಪ್ತಿ ಪಡಿಸಿಕೊಂಡು ತದ ನಂತರ ಒಂದು ಬಿಳಿ ಬಣ್ಣದ ಚೀಲದಲ್ಲಿ ಅವುಗಳನ್ನು ಹಾಕಿ JK ಎಂಬ ಮೊಹರನ್ನು ಒತ್ತಿ ಸೀಲ್ ಮಾಡಿ ತದ ನಂತರ ಚಾಸಾ-1 ರವರು ಸ್ಥಳದಲ್ಲಿ ಗುನ್ಹೆ ಮತ್ತು ಜಪ್ತಿ ಪಂಚನಾಮೆಯನ್ನು 09.30 ರಿಂದ 10.30 ರ ವರೆಗೆ ಮಾಡಿರುತ್ತಾರೆ. ಜಪ್ತಿ ಪಡಿಸಿಕೊಂಡ ಸರಾಯಿ ಪೌಂಚಗಳು ಮತ್ತು ಬಂಧಿಸಿದ ಆರೋಪಿತನನ್ನು ತೆಗೆದುಕೊಂಡು ಠಾಣೆಗೆ ಬಂದಿರುತ್ತೇವೆ. ತದ ನಂತರ ಮುಂದಿನ ಚಾಸಾ-1 ರವರು ಮುಂದಿನ ಕ್ರಮಕ್ಕಾಗಿ ದೊರೆತ ಸರಾಯಿ ಪೌಂಚಗಳು ಮತ್ತು ಬಂಧಿಸಿದ ಆರೋಪಿತನನ್ನು ಹಸ್ತಾಂತರಿಸಿರುತ್ತಾರೆ.

ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ ಸೀಲ್ ಮಾಡಿದ ಒಂದು ಬಿಳಿ ಬಟ್ಟೆಯ ಚೀಲವನ್ನು ತೆಗೆದು ಅದರಲ್ಲಿರುವ 90ML ನ 37 Original Choice ನ ಟೇಟ್ರಾ ಪಾಕೇಟಗಳನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ **ಮು.ಮಾ-1** ಎಂದು ಗುರುತಿಸಲಾಯಿತು.

ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ ಒಂದು ಖಾಕಿ ಕವರನಲ್ಲಿರುವ ರೂ.240/-ಗಳನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ **ಮು.ಮಾ-2** ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **RDS** ವಕೀಲರಿಂದಃ-</u>

ಚಾಸಾ-1 ರವರಿಗೆ ಬಾತ್ಮಿ ಬಂದಾಗ ನಾವು ಬಂದರವಾಡ ಗ್ರಾಮದ ಗಸ್ತು ಕರ್ತವ್ಯದಲ್ಲಿ ಇದ್ದೆವು.

ಬಂದರವಾಡ ಗ್ರಾಮದ ಬಸ್ಸ ನಿಲ್ದಾಣದಿಂದ ಬಂದರವಾಡ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಸುಮಾರು 50 ಮೀಟರ ಅಂತರದಲ್ಲಿ ಇದೆ ಎಂದರೆ ಸರಿ. ಚಾಸಾ-1 ರವರಿಗೆ ಗುಪ್ತ ಮಾಹಿಡಿ 09.10 ಕ್ಕೆ ಬಂದಿರುತ್ತದೆ. ಚಾಸಾ-6 ರವರು ಯಾವ ಊರಿನಿಂದ ಯಾವ ಊರಿನಿಂದ ಬಂದರು ನನಗೆ ಗೊತ್ತಿಲ್ಲಾ. ಚಾಸಾ-6 ರವರು ಕರೆಯಲು ಹೋಗಿದ್ದರು, ಪಂಚರನ್ನು ಕರೆದುಕೊಂಡು ಚಾಸಾ-6 ರವರು ಮರಳಿ ಬಂದಿರುತ್ತಾರೆ. ಚಾಸಾ-2 ಮತ್ತು 3 ರವರು ದೇವಲ ಗಾಣಗಾಪೂರದವರು ಎಂದರೆ ಸರಿ. ನಾವು ಪಂಚರು ಬಂದ ತಕ್ಷಣ ದಾಳಿಗೆ ಹೋಗಿರುತ್ತೇವೆ. ಆರೋಪಿಯ ತಂದೆಯವರ ಹೆಸರನ್ನು ಚಾಸಾ-1 ರವರು ಕೇಳಿ ತಿಳಿದುಕೊಂಡಿರುತ್ತಾರೆ.

ಬಂಧಿಸಿದ ವ್ಯಕ್ತಿಯನ್ನು ಹೊರತು ಪಡಿಸಿ ಬೇರೆ ಯಾರಿಗು ಬಂದಿತ ವ್ಯಕ್ತಿಯ ಹೆಸರನ್ನು ವಿಚಾರಣೆ ಮಾಡಿಲ್ಲಾ. ಜಪ್ತಿ ಪಡಿಸಿಕೊಂಡ ಮುದ್ದೇ ಮಾಲುಗಳ ಮೌಲ್ಯ ರೂ.1290/-ಗಳು ಇದ್ದು, ಒಂದು ಪೌಂಚನ ಮೌಲ್ಯ ರೂ.35/- ಇರುತ್ತದೆ. ನಾವು ದಾಳಿ ಮಾಡಲು ಯಾವತ್ತು ಒಂದು ಬಿಳಿ ಬಟ್ಟೆಯ ಚೀಲ ಮತ್ತು ಸೂಜಿ, ದಾರ ಇರುತ್ತವೆ. ನಾವು ಯಾವುದೇ ಗಸ್ತು ಕಾರ್ಯಕ್ಕೆ ಹೋಗಿಲ್ಲಾ, ಯಾವುದೇ ದಾಳಿಗೆ ಹೋಗಿಲ್ಲಾ ಮತ್ತು ಆರೋಪಿಯ ಕಡೆಯಿಂದ ಯಾವುದೇ ಮುದ್ದೇ ಮಾಲು ಜಪ್ತಿ ಪಡಿಸಿಕೊಂಡಿಲ್ಲಾ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ